<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.</u>

ದಿನಾಂಕ 28 ನೇ ನವೆಂಬರ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :</u> ವಾದಿ ಪರ ಶ್ರೀ ಎಸ್. ವಿ. ಎಸ್. ವಕೀಲರಿಂದಃ-

1. ನಾನು ಮತ್ತು ವಾದಿ ಕೋಣಿಯಂಡ ಕುಟುಂಬದವರು ಎಂದರೆ ಸರಿ. ನಾನು ಮತ್ತು ವಾದಿ ಒಂದೇ ಪೂರ್ವಜರ ಮಕ್ಕಳು ಎಂದರೆ ಸರಿ. ನಮ್ಮ ಪಿತ್ರಾರ್ಜಿತ ಆಸ್ತಿಗಳು ವಿಭಾಗ ಆಗಿದೆ ಎಂದರೆ ಸರಿ. ನಾನು ಮತ್ತು ವಾದಿ ಬಾಳಾಜಿ ಗ್ರಾಮದಲ್ಲಿ ವಾಸವಿದ್ದೇವೆ. ಸರ್ವೆ ನಂ 53/2, ಸರ್ವೆ ನಂ 53/5, ಸರ್ವೆ ನಂ 53/8, ಸರ್ವೆ ನಂ 42/2 ಆಸ್ತಿಗಳು ನನಗೆ ಸೇರಿದೆ. ಸರ್ವೆ ನಂ 53/2, ಸರ್ವೆ ನಂ 53/5, ಸರ್ವೆ ನಂ 53/8 ಕಾಫಿ ತೋಟ ಮತ್ತು ಸರ್ವೆ ನಂ 42/2 ಗದ್ದೆ ಆಗಿರುತ್ತದೆ. ಸರ್ವೆ ನಂ 42/2 ರಲ್ಲಿ ನನ್ನ ಪೂರ್ವಜರು ಭತ್ತದ ಕೃಷಿ ಮಾಡುತ್ತಿದ್ದರು. ನನ್ನ ತಂದೆಯ ತಂದೆ ಹೆಸರು ಕೆ. ಟಿ. ಅಣ್ಣಯ್ಯ. ಸದರಿವರು ಸಹ ಸರ್ವೆ ನಂ 42/2 ರಲ್ಲಿ ಭತ್ತದ ಕೃಷಿ ಮಾಡುತ್ತಿದ್ದರು. ಸರ್ವೆ ನಂ 53/2, ಸರ್ವೆ ನಂ 53/5, ಸರ್ವೆ ನಂ 53/8 ಆಸ್ತಿಗಳ ನಡುವೆ ರಸ್ತೆ ಇದೆಯಾ ಎಂದರೆ ಸಾಕ್ಷಿಯು ರಸ್ತೆ ಇದೆ ಆದರೆ ಅದು ನನ್ನ ಸ್ವಂತ ರಸ್ತೆ ಇದೆ ಎನ್ನುತ್ತಾರೆ. ಸರ್ವೆ ನಂ 53/2 ಮುಖ್ಯ ರಸ್ತೆಗೆ ಹೊಂದಿಕೊಂಡಿರುತ್ತದೆ.

2. ದಾವಾ ರಸ್ತೆಯು ಸರ್ವೆ ನಂ 53/2 ರಿಂದ ಪ್ರಾರಂಭವಾಗಿ ಸರ್ವೆ ನಂ 53/5, ಸರ್ವೆ ನಂ 53/8 ಮಧ್ಯದಿಂದ ನಂತರ ಮುಂದೆ ಸರ್ವೆ ನಂ 42/2 ಕ್ಕೆ ಹೋಗುತ್ತದೆ ಎಂದರೆ ಸರಿ. ಸರ್ವೆ ನಂ 42/2 ಕ್ಕೆ ಹೊಂದಿಕೊಂಡಂತೆ ವಾದಿಗೆ ಯಾವುದೇ ಆಸ್ತಿ ಇರುವುದಿಲ್ಲ. ಸರ್ವೆ ನಂ 42/2 ಚೆಕ್ಕುಬಂದಿ ಹೇಳಬಲ್ಲೇ. ಪೂರ್ವಕ್ಕೆ- ಸರ್ವೆ ನಂ 43/2 ಕೆ. ಡಿ. ರೋಹಿಣಿರವರ ಆಸ್ತಿ, ಪಶ್ಚಿಮಕ್ಕೆ - ಸರ್ವೆ ನಂ 42/7, ಸರ್ವೆ ನಂ 42/8 ಮತ್ತು ಸರ್ವೆ ನಂ 42/9 ಆಸ್ತಿಗಳಿವೆ, ದಕ್ಷಿಣಕ್ಕೆ - ಸರ್ವೆ ನಂ 53/8 ನನಗೆ ಸೇರಿದ ಆಸ್ತಿ ಮತ್ತು ಉತ್ತರಕ್ಕೆ - ಸರ್ವೆ ನಂ 42/9 ಅಥವಾ ಸರ್ವೆ ನಂ 42/8 ರ ಆಸ್ತಿ ಮುಂದುವರೆಯುತ್ತದೆ ಎನ್ನುತ್ತಾರೆ. ಸರ್ವೆ ನಂ 42/2 ರಲ್ಲಿ ನನಗೆ ಮತ್ತು ನನ್ನ ಚಿಕ್ಕಪ್ಪ ರವರಿಗೆ ಸೇರಿರುತ್ತದೆ. ನನ್ನ ಚಿಕ್ಕಪ್ಪನವರ ಹೆಸರು ದೇವಯ್ಯ. ರೋಹಿಣಿರವರು ದೇವಯ್ಯನವರ ಪತ್ನಿ ಎಂದರೆ ಸರಿ. ರೋಹಿಣಿರವರ ಸರ್ವೆ ನಂ 42/2 ಆಸ್ತಿ ವಾದಿಗೆ ಸೇರಿರುವ ಆಸ್ತಿಗೆ ಲಗತ್ತಾಗಿದೆ ಎಂದರೆ ಸರಿ. ನನ್ನ ಸ್ವಾಧೀನದಲ್ಲಿರುವ ಸರ್ವೆ ನಂ 42/2

ಮತ್ತು ರೋಹಿಣಿರವರಿಗೆ ಸೇರಿದ ಆಸ್ತಿ ಸರ್ವೆ ನಂ 42/2 ಆಸ್ತಿಯ ನಂತರ ವಾದಿಯ ಸರ್ವೆ ನಂ 42/1 ಆಸ್ತಿ ಇದಿಯಾ ಎಂದರೆ ಸಾಕ್ಷಿಯು ಅಂತಹ ಆಸ್ತಿ ಇರುವುದಿಲ್ಲ ಎನ್ನುತ್ತಾರೆ.

3. ವಾದಿಯ ಯಾವ ಸರ್ವೆ ನಂ ಆಸ್ತಿಗೆ ರೋಹಿಣಿಯವರ ಯಾವ ಸರ್ವೆ ನಂ ಆಸ್ತಿ ಲಗತ್ತಾಗಿದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂ 53/2, ಸರ್ವೆ ನಂ 53/5, ಸರ್ವೆ ನಂ 53/8 ಮತ್ತು ಸರ್ವೆ ನಂ 42/2 ಆಸ್ತಿಗಳನ್ನು ದಾಟಿಕೊಂಡ ಹೋದರೆ ರೋಹಿಣಿರವರ ಆಸ್ತಿ ಸಿಗುತ್ತದೆ ಎಂದರೆ ಸರಿ. ರೋಹಿಣಿರವರ ಆಸ್ತಿಯಿಂದ ವಾದಿಯ ಆಸ್ತಿಗೆ ಹೋಗಬಹುದು ಎಂದರೆ ಸರಿ. Counter claim ರಸ್ತೆ ಅಸ್ತಿತ್ವದಲ್ಲಿರುತ್ತದೆ. ಸದರಿ ರಸ್ತೆಯ ಮೇಲೆ ವಾದಿ ರಸ್ತೆ ಬಿಟ್ಟುಕೊಡಬೇಕೆಂದು ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. Counter claim ರಸ್ತೆ ನನ್ನ ಪೂರ್ವಜರು ಎಷ್ಟು ವರ್ಷದಿಂದ ಬಳಸುತ್ತಿದ್ದರು ಎಂದರೆ ಸಾಕ್ಷಿಯು ನನ್ನ ಪೂರ್ವಜರ ಕಾಲದಲ್ಲಿ ರಸ್ತೆ ಇರಲಿಲ್ಲ ಎನ್ನುತ್ತಾರೆ. Counter claim ರಸ್ತೆ ನನ್ನ ಪೂರ್ವಜರು ತೋಟ ಮತ್ತು ಗದ್ದೆಗಳಿಗೆ ಹೋಗಲು ಬಳಸುತ್ತಿದ್ದರು ಎಂದರೆ ಸರಿಯಲ್ಲ. Counter claim ರಸ್ತೆಗೆ ಪಂಚಾಯಿತಿಯಿಂದ ಯಾವುದೇ ಅಭಿವೃದ್ಧಿ ಮಾಡಿರುವುದಿಲ್ಲ, ಸಾಕ್ಷಿಯು ಮುಂದುವರೆದು ನನ್ನ ಸ್ವಂತ ಖರ್ಚಿನಿಂದ ಅದನ್ನು ಅಭಿವೃದ್ಧಿ ಪಡಿಸಿರುತ್ತೇನೆ. ಪಂಚಾಯಿತಿ ವತಿಯಿಂದ Counter claim ರಸ್ತೆಗೆ Metling ಕಲ್ಲುಗಳನ್ನು ಹಾಕಿ ಅಭಿವೃದ್ಧಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ.

4. ವಾದಿಯು ದಾವಾಸ್ತಿ ಮತ್ತು Counter claim ಆಸ್ತಿ ವಿಚಾರವಾಗಿ ಮಾಯಮುಡಿ ಪಂಚಾಯಿತಿಗೆ ದೂರನ್ನು ಸಲ್ಲಿಸಿದ್ದರು ಎಂದರೆ ಸರಿ. ಈ ಕುರಿತು ಪಂಚಾಯಿತಿ ಅಧಿಕಾರಿಗಳು ನನ್ನನ್ನು ಮತ್ತು ವಾದಿಯನ್ನು ಕರೆದು ನಡಾವಳಿ ಮಾಡಿರುತ್ತಾರೆ ಎಂದರೆ ಸರಿ. ಅದು ಬರವಣಿಗೆಯಲ್ಲಿ ಆಗಿದ್ದೆ ಎಂದರೆ ಸರಿ. ನಾನು ನಡಾವಳಿಗೆ ಶರತ್ತುಬದ್ಧವಾಗಿ ಸಹಿಯನ್ನು ಹಾಕಿರುತ್ತೇನೆ. ಸಾಕ್ಷಿಗೆ ನಿ. ಪಿ. 8 ಅನ್ನು ತೋರಿಸಿ ಕೇಳಿದಾಗ ಸಾಕ್ಷಿಯು ಅದನ್ನು ನೋಡಿ ಹೌದು ಎಂದು ಒಪ್ಪಿರುತ್ತಾರೆ. ಅದೇ ರೀತಿ ನಿ. ಪಿ. 8 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ. ಪಿ. 8(ಎ) ಎಂದು ಗುರುತಿಸಲಾಯಿತು. ನಿ. ಪಿ. 8 ರಲ್ಲಿ ವಾದಿಗೆ ದಾವಾಸ್ತಿಯ ಮೇಲೆ ಓಡಾಡಲು ತೊಂದರೆ ಮಾಡುವುದಿಲ್ಲ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ಅದು ಶರತ್ತು ಬದ್ಧವಾಗಿ ನಮೂದು ಮಾಡಿ ಅದಕ್ಕೆ ನಾನು ಸಹಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ.

ಮುಂದುವರೆದು ಪಾಟೀ ಸವಾಲಿಗೆ ಸಮಯವಕಾಶ ಕೋರಲಾಗಿ ಸಮಯವಾಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
**ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.**

Sd/xxx-

(ಸಾಕ್ಷಿಯವರ ಸಹಿ) ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.